ಮಾತಾಡುವ ಹಾಗಿದ್ದಾಗ ಏನೂ ಬೈಯದೆ ನಿಮ್ಮನ್ನೆಲ್ಲ ಸಾಕುತ್ತಿದ್ದನಾ? ತನ್ನ ಮಾತನ್ನು ಒಪ್ಪದಿದ್ದರೆ ನಿನ್ನಪ್ಪ ಅದೆಷ್ಟು ರಂಪ ರಾದ್ಧಾಂತ ಮಾಡುತ್ತಿರಲಿಲ್ಲ!' ಎಂದು ಆಯಿ ಎಂದಿನ ವರಸೆ ತೆಗೆದಳು. ಆಯಿಯೊಂದಿಗೆ ವಾದಕ್ಕೆ ನಿಲ್ಲಲು ನನ್ನ ಬಳಿ ಸರಕಿಲ್ಲವೆಂದು ಆಯಿಯ ಮಾತಿನ ದಿಕ್ಕನ್ನು ಬದಲಾಯಿಸಲು ನಾನು ಬೇರೆ ಸುದ್ದಿ ತೆಗೆದೆ.

'ಆಯಿ, ಅರ್ಜೆಂಟ್ ಬಾ ಎಂದು ನಿಂತ ಕೈಲಿ ನನ್ನನ್ನು ಹೊರಡಿಸಿ, ಕರೆಯಿಸಿಕೊಂಡೆಯಲ್ಲ ಯಾಕೆ?' ಎಂದು ಕೇಳಿದೆ. ತಡಿ ಬಿಡಿಸಿ ಚಾದರ ಕುಡುಗಿ ಹಾಸುತ್ತಿದ್ದ ಆಯಿ 'ನಿನ್ನಪ್ಪನಿಗೆ ದುಪ್ಪಡಿ ಕೊಟ್ಟು ಬರುತ್ತೇನೆ' ಎಂದು ಹೊರಟಿದ್ದು ನೋಡಿದರೆ ನನ್ನ ಪ್ರಶ್ನೆಯನ್ನು ಧಿಕ್ಕರಿಸಿದವಳಂತೆ ಕಂಡಳು.

ನಾಳೆಯೇನಾದರೂ ಹೆಣ್ಣು ನೋಡುವ ಶಾಸ್ತ್ರ ಇಟ್ಟುಕೊಂಡಿದ್ದಿರಬಹುದೇ ಎಂಬ ಸಂದೇಹ ಆಯಿ ಫೋನು ಮಾಡಿದಾಗಿನಿಂದಲೂ ನನಗೆ ಇತ್ತಾದುದರಿಂದ ಎರಡು ಒಳ್ಳೆಯ ಸೀರೆಯನ್ನು ಹಿಡಿದುಕೊಂಡೇ ಬಂದಿದ್ದೆ. ನನ್ನ ವಾರಗೆಯವರೆಲ್ಲಾ ಮದುವೆ ಮನೆಕಾಲ ಕಂಡು, ಮಕ್ಕಳ ಹೇಲು ಉಚ್ಚೆ ಬರಗುತ್ತ ಜನ್ಮ ಸಾರ್ಥಕ ಮಾಡಿಕೊಳ್ಳುತ್ತಿರುವಾಗ ನನಗೂ ಮದುವೆಯೆಂಬ ಮರೀಚಿಕೆಯ ಬಯಕೆಯಾಗುತ್ತಿತ್ತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಹೆಂಡತಿಯನ್ನು ಆಸ್ಪತ್ರೆವರೆಗೂ ಹೊತ್ತು ಬದುಕಿಸಿಕೊಂಡ ಕೋಟಿಯಂತಹ ಗಂಡನ ಆಸೆ ನನಗೂ ಆಗುತ್ತಿತ್ತು. ಆದರೆ ನನ್ನ ತಳಮಳವನ್ನು ಅರ್ಥೈಸಿಕೊಳ್ಳದೆ ಅಡ್ಡ ಮಾತೆಸೆಯುವ ಹೆರ್ಪನೇ ಮದುವೆಯನ್ನು ಕಾಣದ ನನಗೊಂದು ದೊಡ್ಡ ಸವಾಲು. ಯಾವ ಸೊಲ್ಲೆತ್ತಿದ್ದರೂ ಮತ್ತೆ ಮತ್ತೆ ವಿನೋದನೆಂಬ ಅದೇ ಪಲ್ಲವಿಯನ್ನು ತಲುಪಿ ಹೇಕರಿಕೆ ಉಂಟುಮಾಡುವ ಈ ಕೊಂಕು ಕಿರಿಕಿರಿಗಳಿಗೆಲ್ಲ ನಾಳೆ ನನ್ನನ್ನು ನೋಡಲು ಬರುವ ಹುಡುಗನಲ್ಲಿ ಏನೇ ಐಬಿದ್ದರೂ ಕೂಡ ಮದುವೆಗೆ ಒಪ್ಪಿ ಮುಕ್ತಾಯ ಹಾಡಬೇಕು ಎಂದು ನಿರ್ಧರಿಸಿಕೊಂಡೇ ಬಂದಿದ್ದೆ.

ವಿನೋದನನ್ನು ನಾನು ಒಪ್ಪಲಿಲ್ಲ ಎಂಬ ನೋವು ನನಗೂ ಇದೆ. ಆದರೆ ಅವನ ನಂತರ ಬಂದ ಯಾವ ಸಂಬಂಧವನ್ನೂ ನಾನು ಬೇಡವೆಂದಿರಲಿಲ್ಲ. ಚಿಕ್ಕಯ್ಯ ಇಂತಲ್ಲಿ ಜಾತಕ ಕೊಟ್ಟು ಬರುತ್ತೇನೆಂದರೆ ಯಾವತ್ತಿಗೂ ನಾನು ದೂಸರಾ ಪ್ರಶ್ನೆ ಇಟ್ಟಿರಲಿಲ್ಲ. ನನ್ನ ಹಣೆಬರಹ ಹೇಗಿತ್ತೆಂದರೆ, ಒಂದೋ ಜಾತಕವೇ ಹೊಂದುತ್ತಿರಲಿಲ್ಲ ಇಲ್ಲದಿದ್ದರೆ ಹುಡುಗನಿಗೆ ನಾನು ಹಿಡಿಸುತ್ತಿರಲಿಲ್ಲ, ಗೇರುಕೊಪ್ಪದ ಹುಡುಗನಿಗೆ ನಾನು ಹಿಡಿಸಿದರೂ ಅವನ ಅಪ್ಪಅಮ್ಮ ಏನೋ ಒಂದು ಕಡ್ಡಿ ಇಟ್ಟು ಸಂಬಂಧ ಬೇಡಾ ಎಂದುಬಿಟ್ಟಿದ್ದರು. ಕೆಲವು ಸಂಬಂಧಗಳಂತೂ ಗೋತ್ರ ಕೇಳುತ್ತಿದ್ದಂತೆಯೇ ಮುಗಿದು ಹೋಗುತ್ತಿದ್ದವು. ಇದರಲ್ಲಿ ನನ್ನ ತಪ್ಪೇನು ಎಂದೇ ನನಗರ್ಥವಾಗುತ್ತಿರಲಿಲ್ಲ.

ಆಯಿ ದುಪ್ಪಡಿ ಕೊಟ್ಟು ಕೋಣೆಗೆ ಬಂದವಳೇ, 'ನಿನ್ನಣ್ಣ ನಿನ್ನೆ ಫೋನು ಮಾಡಿದ್ದ. ತನ್ನ ಜೊತೆ ಬಂದುಬಿಡಿ ಎಂದು ಗಲಾಟೆ ಅವನದು. ನನಗೋ ಇಲ್ಲಿಂದ ಹೊರಬಿದ್ದರೆ ನೀರಿನಿಂದ ತೆಗೆದ ಮೀನಿನ ಅವಸ್ಥೆ. ಹೇಗೋ ಏನೋ ಕಷ್ಟವೋ ಸುಖವೋ ಹೊಂದಿಕೊಂಡು ಇಲ್ಲಿಯವರೆಗೆ ಬದುಕಿ ಬಂದಿದ್ದಾಗಿದೆ. ಇನ್ನು ಮೇಲೆ ಹೊಸ ರೀತಿಯ ಜೀವನ ನನ್ನ ಕೈಲಂತೂ ಸಾಧ್ಯವಿಲ್ಲ.' ಎಂದು ಒಂದೇ ಸಮನೆ ಅಣ್ಣನ ಆಹ್ವಾನವನ್ನು ತಿರಸ್ಕರಿಸುವ ರೀತಿಯಲ್ಲಿ ತನ್ನ ವಾದವನ್ನು ಮಂಡಿಸಿದಳು.

ಈ ಕಾಡಿನ ನಡುವೆ ಕಾಡು ಮನುಷ್ಯರಂತೆ ಇನ್ನೊಬ್ಬರ ಬದುಕಲ್ಲಿ ರಾಜಕೀಯ ಮಾಡಿಕೊಂಡಿರುವುದಕ್ಕಿಂತ ಶಹರದಲ್ಲಿ ಆಜುಬಾಜುವಿನ ಮನೆಯವರ ಜೊತೆಯೂ ಅಪರಿಚಿತರೆನ್ನುವ ಹಾಗೆ ಬದುಕುವುದೇ ಲೇಸಿರಬಹುದು ಎನ್ನಿಸಿದರೂ ಆಯಿಯ ಮನಸ್ಸಿನಲ್ಲೇನಿದೆ ಎಂದು ಅವಳಾಗೇ ಹೇಳುವವರೆಗೂ ಕಾಯೋಣವೆಂದುಕೊಂಡು ಆಯಿಯ ಮುಂದಿನ ಮಾತಿಗೆ ಎದುರುನೋಡುತ್ತ ಕುಳಿತೆ.

'ಚೆನ್ನೈ ನನಗೆ ತೀರಾ ಅಪರಿಚಿತ, ಭಾಷೆಯೂ ಹೊಸದು. ವಾತಾವರಣವಂತೂ ನನಗೆ